ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ.

ಕರ್ನಾಟಕ ಲೋಕ ಸೇವಾ ಆಯೋಗದವರಿಂದ ನೇಮಕಾತಿ.

೧೪೬೦. ಶ್ರೀ ಕೆ. ಎಸ್. ಬೇಳಗಿ (ಬ್ಯಾಡಗಿ). —ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೦ ರಿಂದ ೧೯೮೫ರ ವರೆಗೆ ಕರ್ನಾಟಕ ಲೋಕ ಸೇವಾ ಆಯೋಗ, ನೇಮಕ ಮಾಡಿದ ವಿವಿಧ ದರ್ಜೆಯ ಹುದ್ದೆಗಳ ಸಂಖ್ಯೆ ಎಷ್ಟು ?

ಆ) ಅದರಲ್ಲಿ ಪರಿಶಿಷ್ಟ ಜಾತಿ ವರ್ಗಗಳ ಅಭ್ಯರ್ಥಿಗಳಿಗೆ ನೀಡಿದ ಸಂಖ್ಯೆ ಎಷ್ಟು ? ಮೊದಲನೇ ದರ್ಜೆಯಿಂದ ಬೇರೆ ಬೇರೆ ದರ್ಜೆಗಳಿಗೆ ಪಟ್ಟಿ ವಿವರ ನೀಡುವುದು ?

ಇ) ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳು ಪಟ್ಟಣದಿಂದ ಬಂದ ಅಭ್ಯರ್ಥಿಗಳೆಷ್ಟು ಹಾಗೂ ಹಳ್ಳಿಗಳಿಂದ ಬಂದ ಅಭ್ಯರ್ಥಿಗಳ ಸಂಖ್ಯೆ ಎಷ್ಟು ?

ಈ) ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಲ್ಲಿ ಹುದ್ದೆಗಳನ್ನು ಪಡೆದ ಬೇರೆ ಬೇರೆ ಜಾತಿಗಳ ಪಟ್ಟಿಯನ್ನೊದಗಿಸುವುದು.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೯೮೦ ರಿಂದ ೧೯೮೫ರ ವರೆಗೆ ಕರ್ನಾಟಕ ಲೋಕ ಸೇವಾ ಆಯೋಗ ನೇಮಕ ಮಾಡಿದ ವಿವಿದ ದರ್ಜೆಯ ಹುದ್ದೆಗಳ ಸಂಖ್ಯೆ ಈ ಕೆಳಕಂಡಂತೆ ಇದೆ.

೧ನೇ ದರ್ಜೆ	೨ನೇ ದರ್ಜೆ	೩ನೇ ದರ್ಜೆ
೧೪೪೧	೩೪೩೮	೯೭೨೯

ಆ) ಪರಿಶಿಷ್ಟ ಜಾತಿ–ಪಂಗಡ ಅಭ್ಯರ್ಥಿಗಳಿಗೆ ವಿವಿಧ ದರ್ಜೆಯಲ್ಲಿ ನೀಡಿದ ಸಂಖ್ಯೆ ಈ ಕೆಳಕಂಡಂತೆ ಇದೆ.—

೧ನೇ ದರ್ಜೆ		೨ನೇ ದರ್ಜೆ		೩ನೇ ದರ್ಜೆ	
ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
೨೮೦	೪೦	೪೪೧	೮೯	೧೬೭೫	೪೯೦

ಇ) ಈ ಮಾಹಿತಿ ಸಂಗ್ರಹಿಸುವುದು ಸಾಧ್ಯವಿಲ್ಲವಾಗಿದೆ.

ಈ)

ಲೋಕೋಪಯೋಗಿ ಇಲಾಖೆಯಲ್ಲಿ ತೆರವಾದ ಸ್ಥಾನಕ್ಕೆ ಮುಂಬಡ್ತಿ ನೀಡುವ ಬಗ್ಗೆ.

೧೪೬೨ ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಲೋಕೋಪಯೋಗಿ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಪ್ರಥಮ ದರ್ಜೆ ಗುಮಾಸ್ತರ ತೆರವಾದ ಹುದ್ದೆಗಳೆಷ್ಟು ?

ಅ) ಸದರಿ ಹುದ್ದೆಗಳನ್ನು ಭರ್ತಿ ಮಾಡಲು ದ್ವಿತೀಯ ದರ್ಜೆ ಗುಮಾಸ್ತರಿಗೆ ಪಂಂಬಡ್ತಿ ನೀಡ ಲಾಗಿದೆಯೆ ?

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಈ) ಲೋಕ ಸೇವಾ ಆಯೋಗದಿಂದ ನೇರವಾಗಿ ಪ್ರಥಮ ದರ್ಜೆ ಗುಮಾಸ್ತರನ್ನು ನೇಮಿಸಿ ಕೊಳ್ಳಲಾಗುತ್ತಿದೆಯೆ ? ಸರ್ಕಾರದವರು ಕ್ರಮ ತೆಗೆದುಕೊಳ್ಳುವರೆ ?

ಉ) ಹಾಗಿದ್ದಲ್ಲಿ ಎಷ್ಟು ಹುದ್ದೆಗಳನ್ನು ಮುಂಬಡ್ತಿಗಾಗಿ ಮೀಸಲಿಡಲಾಗಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೮೨ ಹುದ್ದೆಗಳು.

ಆ) ಹೌದು.

ಇ) ಉದ್ಭವಿಸುವುದಿಲ್ಲ.

ಈ) ಹೌದು.

ಉ) ಬಡ್ತಿಗಾಗಿ ಶೇಕಡಾ ೫೦ ರಷ್ಟು.

ಸರ್ಕಾರಿ ನೌಕರರ ಬಗ್ಗೆ ಮಾಹಿತಿ.

೧೨೬೪. ಶ್ರೀ ಬಿ. ಲಕ್ಕಪ್ಪ (ಬೆಳ್ಳಾವಿ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆ ಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೩೧-೧೨-೧೯೮೧ ರ ವರೆಗೆ ರಾಜ್ಯದ ಒಟ್ಟು ಸರ್ಕಾರಿ ನೌಕರರ ಸಂಖ್ಯೆ;

ಆ) ಕರ್ನಾಟಕ ನಾಗರೀಕ ಸೇವಾ (ವರ್ತನೆಗಳು) ನಿಯಮ, ೧೯೬೫ರ ನಿಯಮ ೨೩ರ ಪ್ರಕಾರ ನಿಗದಿತ ನಮೂನೆಗಳಲ್ಲಿ ಆಸ್ತಿ ಮತ್ತು ಋಣ ಪಟ್ಟಿಗಳನ್ನು ಸಲ್ಲಿಸಬೇಕಾಗಿರುವ ಸರ್ಕಾರಿನೌಕರರ ಸಂಖ್ಯೆ ?

ಇ) ೩೧-೩-೧೯೮೬, ೩೧-೩-೧೯೮೭ ಮತ್ತು ೩೧-೩-೧೯೮೮ರ ಪ್ರಕಾರ ಕರ್ನಾಟಕ ನಾಗರೀಕ ಸೇವಾ (ವರ್ತನೆಗಳು) ನಿಯಮ ೧೯೬೫ರ ಪ್ರಕಾರ ಆಸ್ತಿ ಮತ್ತು ಋಣ ಪಟ್ಟಿಗಳನ್ನು ಸಲ್ಲಿಸಿರುವ ಸರ್ಕಾರಿ ನೌಕರರ ಸಂಖ್ಯೆ ?

ಈ) ಆಸ್ತಿ ಮತ್ತು ಋಣ ಪಟ್ಟಿಗಳನ್ನು ಸಲ್ಲಿಸದಿರುವಂತಹ ನೌಕರರ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು.

ಉ) ಅವರ ಸಂಪನ್ಮೂಲಗಳಿಗಿಂತ ಹೆಚ್ಚಿಗೆ ಆಸ್ತಿಯನ್ನು ಶೇಖರಿಸಿರುವಂತೆ ಕಂಡು ಬಂದರೆ ಅಂತಹವರ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮ ?

ಶ್ರೀ ರಾಮಕೃಷ್ಣ ಹೆಗಡೆ. (ಮಾನ್ಯ ಮುಖ್ಯ ಮಂತ್ರಿಯವರು).—

ಅ) ರಾಜ್ಯದಲ್ಲಿ ಒಟ್ಟು ಸರ್ಕಾರಿ ನೌಕರರ ಸಂಖ್ಯೆ ೪,೫೧,೬೧೮.

ಆ) ೩,೬೮,೬೧೯.

ಇ) ಈ ಮಾಹಿತಿ ಸಧ್ಯದಲ್ಲಿ ಲಭ್ಯವಿಲ್ಲ. ಮಾಹಿತಿಯನ್ನು ಸಂಗ್ರಹಿಸಲು ಕಾಲಾವಕಾಶ ಬೇಕು.

ಈ) ಸಾಮಾನ್ಯವಾಗಿ ಪ್ರತಿಯೊಬ್ಬ ಸರ್ಕಾರಿ ನೌಕರನು ಆಸ್ತಿ ಮತ್ತು ಋಣ ಪಟ್ಟಿಯನ್ನು ಪ್ರತಿವರ್ಷವೂ ಸಲ್ಲಿಸುತ್ತಾನೆ. ಆಸ್ತಿ ಮತ್ತು ಋಣ ಪಟ್ಟಿಯನ್ನು ಸಲ್ಲಿಸದಿರುವಂತಹ ಪ್ರಕರಣಗಳು ಇತ್ತೀಚೆಗೆ ಸರ್ಕಾರದ ಗಮನಕ್ಕೆ ಬಂದಿಲ್ಲ.

ಉ) ಯಾವುದೇ ಸರ್ಕಾರಿ ನೌಕರನ ಆಸ್ತಿಯು ಅವನ ಸಂಪನ್ಮೂಲಕ್ಕಿಂತ ಹೆಚ್ಚಾಗಿದೆ ಎಂದು ಕಂಡುಬಂದರೆ ಆತನಮೇಲೆ ಕಾನೂನಿನನ್ವಯ ತನಿಖೆ ನಡೆಸಿ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.